# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

ಸಂಖ್ಯೆ: ಸಚುಆ/ಅ.ಸೂ-1/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 18.04.2013.

## ಅಧಿಸೂಚನೆ

ವಿಷಯ: ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ – ಸಹಕಾರ ಚುನಾವಣಾ ಆಯೋಗದ ರಚನೆ.

ಉಲ್ಲೇಖ: (1) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ:20:ಸಿಎಲ್ಎಂ:2013, ಬೆಂಗಳೂರು, ದಿನಾಂಕ: 18.03.2013.

(2) ಸರ್ಕಾರದ ಅಧಿಸೂಚನೆ CO-21-CLM-2013, ಬೆಂಗಳೂರು ದಿನಾಂಕ: 08.04.2013.

ಕರ್ನಾಟಕ ರಾಜ್ಯದಲ್ಲಿನ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಈ ಹಿಂದೆ ಚುನಾವಣೆಯನ್ನು ಸಹಕಾರ ಸಂಘಗಳ ನಿಬಂಧಕರ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸಲಾಗುತ್ತಿತ್ತು ಎಂಬ ವಿಷಯ ಸಹಕಾರ ಇಲಾಖಾ ಅಧಿಕಾರಿಗಳಿಗೆ ಹಾಗೂ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಗೊತ್ತಿರುವ ವಿಷಯವೇ ಆಗಿದೆ. ಸಹಕಾರ ಸಂಸ್ಥೆಗಳ ಆಡಳಿತ ಸಮಿತಿಯು ಚುನಾವಣಾ ದಿನಾಂಕ ನಿಗದಿ ಪಡಿಸುವ ಅಧಿಕಾರ ಹೊಂದಿತ್ತು. ವ್ಯಾಪ್ತಿಯ ಸಹಕಾರ ಸಂಘಗಳ ನಿಬಂಧಕರು ಚುನಾವಣಾಧಿಕಾರಿಗಳನ್ನು ನೇಮಿಸುತ್ತಿದ್ದರು ಹಾಗೂ ಆ ರೀತಿ ನೇಮಿಸಲಾದ ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘದ ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಿ, ಅದರಂತೆ ಚುನಾವಣೆಯನ್ನು ನಡೆಸಿ, ಆಡಳಿತ ಸಮಿತಿಗೆ ಸದಸ್ಯರನ್ನು ಚುನಾಯಿಸುವುದು ಪದ್ಧತಿಯಾಗಿತ್ತು.

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು ಮುಕ್ತ, ನ್ಯಾಯೋಚಿತ ಹಾಗೂ ಪಾರದರ್ಶಕತೆಯಿಂದ ನಡೆಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012ರಂತೆ ಪ್ರಕರಣ 39 'ಎ' ಗೆ ತಿದ್ದುಪಡಿಯನ್ನು (ಕರ್ನಾಟಕ ಅಧಿನಿಯಮ ಸಂಖ್ಯೆ 3/2013) ತಂದಿದೆ. ಅಲ್ಲದೇ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 2012ರಂತೆ ಪ್ರಕರಣ ಸಂಖ್ಯೆ: 26ಕ್ಕೆ ತಿದ್ದುಪಡಿ ತಂದಿದ್ದು, ಪ್ರಕರಣ 26 'ಎ' ಹೊಸದಾಗಿ ಸೇರ್ಪಡೆಯಾಗಿದೆ. (2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 4) ಈ ಎರಡೂ ಅಧಿನಿಯಮಗಳಿಗೆ ತಂದ ತಿದ್ದುಪಡಿಗಳಿಗೆ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಅನುಮೋದನೆಯನ್ನು ನೀಡಿರುತ್ತಾರೆ. ಈ ತಿದ್ದುಪಡಿಗಳು ದಿನಾಂಕ: 11.02.2013 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39 'ಎ' ದಲ್ಲಿನ ಅವಕಾಶದಂತೆ ಇನ್ನು ಮುಂದೆ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯು ಸಹಕಾರಿ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿರುತ್ತದೆ. ಹೊಸದಾಗಿ ಸೇರ್ಪಡೆಗೊಂಡ ಅಧಿನಿಯಮ 39 'ಎಎ' ದಂತೆ ರಾಜ್ಯ ಸರ್ಕಾರವು ಸಹಕಾರ ಚುನಾವಣಾ ಆಯೋಗದ ರಚನೆ ಮಾಡಲು ಅಧಿಕಾರ ಹೊಂದಿರುತ್ತದೆ.

ಕರ್ನಾಟಕ ಸರ್ಕಾರವು ಉಲ್ಲೇಖಿತ ಅಧಿಸೂಚನೆಯಂತೆ ಸಹಕಾರ ಚುನಾವಣಾ ಆಯುಕ್ತರು ಹಾಗೂ ಕಾರ್ಯದರ್ಶಿಯನ್ನೊಳಗೊಂಡ ಸಹಕಾರ ಚುನಾವಣಾ ಆಯೋಗವನ್ನು ದಿನಾಂಕ: 18.03.2013 ರಂದು ಅಧಿಸೂಚನೆ ಹೊರಡಿಸುವ ಮೂಲಕ ಈಗಾಗಲೇ ರಚನೆ ಮಾಡಿರುತ್ತದೆ. ಉಲ್ಲೇಖ (2) ರ ಸರ್ಕಾರದ ಅಧಿಸೂಚನೆ ರೀತ್ಯಾ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು, ಶ್ರೀ. ಎನ್. ಸಿ. ಮುನಿಯಪ್ಪ, ಐ.ಎ.ಎಸ್., ರವರನ್ನು ಸಹಕಾರ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಿರುತ್ತಾರೆ. ಅದರಂತೆ, ಶ್ರೀ. ಎನ್. ಸಿ.

ಮುನಿಯಪ್ಪ, ಐ.ಎ.ಎಸ್., ರವರು ಕರ್ನಾಟಕ ರಾಜ್ಯದ ಸಹಕಾರ ಚುನಾವಣಾ ಆಯುಕ್ತರಾಗಿ ದಿನಾಂಕ: 12.04.2013ರಂದು ಅಧಿಕಾರ ವಹಿಸಿ ಕೊಂಡಿರುತ್ತಾರೆ.

**ಮೇಲ್ಕಂಡ** ಹಿನ್ನೆಲೆಯಲ್ಲಿ, ಸಹಕಾರ ಇಲಾಖಾಧಿಕಾರಿಗಳು / ಸಹಕಾರ ಸಂಸ್ಥೆಗಳು ಸಹಕಾರ **ಸಂಘಗಳ** ಅಧಿನಿಯಮಕ್ಕೆ ಇತ್ತೀಚಿಗೆ ಆಗಿರುವ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು, ಅಧಿನಿಯಮಗಳಿಗೆ / ನಿಯಮಗಳಿಗೆ / ಬೈಲಾಗಳಿಗೆ ಅನುಗುಣವಾಗಿ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನೀಡುವ ನಿರ್ದೇಶನಗಳನ್ನು ತಪ್ಪದೇ ಪಾಲಿಸುವಂತೆ ಸೂಚಿಸಿದೆ.

(ಎನ್. ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ :

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಸಹಕಾರ ಸಂಘಗಳ ಅಪರ ನಿಬಂಧಕರು( ) ಕೇಂದ್ರ ಕಚೇರಿ, ಬೆಂಗಳೂರು
3. ಸಹಕಾರ ಸಂಘಗಳ ಜಂಟಿ ನಿಬಂಧಕರು, .............. ಪ್ರಾಂತ, ............
4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು
12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು
13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, ........................

ಪ್ರತಿಗಳು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

ಮ:02.

# ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಸಹಕಾರ ಚುನಾವಣೆ ಆಯೋಗ

ಸಂಖ್ಯೆ: ಸಚುಆ/ಅ.ಸೂ-2/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು,
ವಿಧಾನಸೌಧ, ಡಾ। ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 22.04.2013

**ಅಧಿಸೂಚನೆ**

ವಿಷಯ : **ಸಹಕಾರಿ ಸಂಸ್ಥೆಗಳಿಗೆ ಚುನಾವಣೆ ನಡೆಸುವಿಕೆ-ಸಹಕಾರಿ ಕಾನೂನಿನಲ್ಲಿನ ಅವಕಾಶಗಳು**

ಉಲ್ಲೇಖ : **1. ಸರ್ಕಾರದ ಅಧಿಸೂಚನೆ: ಅಔ-20-ಅಐಬ-2013, ಬೆಂಗಳೂರು, ದಿನಾಂಕ: 18.3.2013**

**2. ಸರ್ಕಾರದ ಅಧಿಸೂಚನೆ ಅಔ-21-ಅಐಬ-2013, ಬೆಂಗಳೂರು, ದಿನಾಂಕ:** 08.04.2013

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳನ್ನು ಗಮನಿಸಲು ಕೋರಿದೆ.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವನ್ನು ರಚನೆ ಮಾಡಿರುವ ವಿಷಯ ಈಗಾಗಲೇ ನಿಮಗೆ ತಿಳಿದಿದೆ. ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಸಬೇಕಿದ್ದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ರ ರೀತ್ಯಾ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು ಕರ್ನಾಟಕ ಸಹಕಾರ ಸಂಘದ ಅಧಿನಿಯಮ 1959, ಪ್ರಕರಣ 39ಎ ರೀತ್ಯಾ ಕೆಳಕಂಡಂತೆ 4 ಹಂತಗಳಲ್ಲಿ ನಡೆಸತಕ್ಕದ್ದಾಗಿರುತ್ತದೆ.

1. ಮೊದಲನೇ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ (Primary Societies) ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ. (30.09.2013ರ ಒಳಗೆ)
2. ಎರಡನೇ ಹಂತದಲ್ಲಿ ದ್ವಿತೀಯ ವರ್ಗದ (Secondary Societies) ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ (31.10.2013ರ ಒಳಗೆ)
3. ಮೂರನೇ ಹಂತದಲ್ಲಿ ಸಂಯುಕ್ತ ಸಹಕಾರ ಸಂಘಗಳಿಗೆ (Federal Socieites) ಚುನಾವಣಾ ನಡವಳಿಯು, ದ್ವಿತೀಯ ವರ್ಗದ ಸಹಕಾರ ಸಂಘದ ಚುನಾವಣೆಗಳು ಪೂರ್ಣಗೊಂಡ 30 ದಿವಸಗಳ ನಂತರ ಪ್ರಾರಂಭವಾಗತಕ್ಕದ್ದಾಗಿರುತ್ತದೆ. (30.11.2013ರ ಒಳಗೆ)
4. ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ (Apex Societies) ಚುನಾವಣೆ ನಡವಳಿಯು, ಸಂಯುಕ್ತ ಸಹಕಾರ ಸಂಘಗಳ ಚುನಾವಣೆಗಳು ಪೂರ್ಣಗೊಂಡ 30 ದಿವಸಗಳ ನಂತರ ಪ್ರಾರಂಭವಾಗತಕ್ಕದ್ದಾಗಿರುತ್ತದೆ. (31.12.2013ರ ಒಳಗೆ)

ಸಹಕಾರ ಚುನಾವಣಾ ಆಯೋಗವು, ಚುನಾವಣೆ ನಡೆಸುವ ಸಂಬಂಧವಾಗಿ ಪ್ರಾರಂಭಿಕ ಕೆಲಸಗಳು ಅಂದರೆ ಮತದಾರರ ಪಟ್ಟಿಯನ್ನು ಸಹಕಾರ ಸಂಘಗಳ ಆಡಳಿತ ಮಂಡಳಿಯ ಅವಧಿಯು ಮುಗಿಯುವ ಕೊನೆಯ 6 ತಿಂಗಳ ಪೂರ್ವದಲ್ಲಿ ತಯಾರಿಸುವಲ್ಲಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಈ ದಿಸೆಯಲ್ಲಿ ಸಂಬಂಧಿಸಿದ ಸಹಕಾರ ಸಂಸ್ಥೆಗಳು/ಸಹಕಾರ ಇಲಾಖಾಧಿಕಾರಿಗಳು ಕಾರ್ಯತತ್ಪರರಾಗಬೇಕಾಗಿರುತ್ತದೆ. ಕಳೆದ ಮಾರ್ಚ್ ಅಂತ್ಯಕ್ಕೆ ಚುನಾವಣೆ ನಡೆಸಲು ಬಾಕಿ ಇದ್ದಂತಹ ಚುನಾವಣೆಗಳನ್ನು ಮುಂದೂಡಲಾಗಿದ್ದು, ಸಂಬಂಧಿಸಿದ ಸಂಘಗಳು ಕರಡು ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸದಸ್ಯರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಅದನ್ನು ಗಮನಿಸಿ, ನಂತರ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಸಿದ್ದಪಡಿಸುವುದು.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ (20)ರಲ್ಲಿ ಸದಸ್ಯರ ಮತಗಳ (Votes of Members) ಬಗ್ಗೆ ವಿವರಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ (ಸಂಕ್ಷಿಪ್ತವಾಗಿ 'ನಿಯಮ') 13ರಲ್ಲಿ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಬಗ್ಗೆ ಹಾಗೂ ನಿಯಮ 13-ಎ ದಲ್ಲಿ ಪ್ರತಿ ಸದಸ್ಯರಿಗೆ ಗುರುತಿನ ಚೀಟಿ ವಿತರಿಸುವ ಬಗ್ಗೆ ವಿವರಿಸಲಾಗಿದೆ. ನಿಯಮ 14ರಲ್ಲಿ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಕುರಿತು ಅನುಸರಿಸಬೇಕಾದ ಕ್ರಮದ ಬಗ್ಗೆ ವಿವರಿಸಲಾಗಿದೆ. ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಕರು ನಿಯಮ 14(3) ರೀತ್ಯಾ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಚುನಾವಣೆ ನಡೆಯುವ ದಿನಾಂಕಕ್ಕೆ 45 ದಿವಸಗಳ ಮುಂಚಿತವಾಗಿ ತಯಾರಿಸತಕ್ಕದ್ದಾಗಿದೆ. ಮತ್ತು ಇದನ್ನು

ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು. ನಿಯಮ 14(4) ರಂತೆ ಸಂಘದ ಸುಸ್ತಿದಾರರ ಪಟ್ಟಿಯನ್ನು ಮತ್ತು ಅರ್ಹತೆಯುಳ್ಳ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿವಸಗಳ ಮುಂಚಿತವಾಗಿ ಪ್ರಕಟಿಸಬೇಕಾಗಿರುತ್ತದೆ. ನಿಯಮ 14(5) ರಂತೆ, ಸಂಘಕ್ಕೆ ಸುಸ್ತಿದಾರರಾದ ಸದಸ್ಯರಿಗೆ [ಅಧಿನಿಯಮ ಪ್ರಕರಣ 20(2)] ಮತದಾನದ ಹಕ್ಕು ಇರುವುದಿಲ್ಲ. ಸದಸ್ಯರು ಮತವನ್ನು ಚಲಾಯಿಸುವ ಕ್ರಮದ ಬಗ್ಗೆ ಅಧಿನಿಯಮ ಪ್ರಕರಣ 21 ರಲ್ಲಿ ವಿವರಿಸಲಾಗಿದೆ. ಸಹಕಾರ ಸಂಘಗಳ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಸಂಬಂಧ ಸರ್ಕಾರವು ಕ್ರಮ ಕೈಗೊಂಡಿದೆ.

ಸಹಕಾರ ಸಂಘದ ಆಡಳಿತ ಸಮಿತಿ ಸದಸ್ಯರ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉಂಟಾದಲ್ಲಿ ಈ ಹಿಂದೆ ಸದರಿ ವಿವಾದಗಳನ್ನು ಚುನಾವಣೆ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ 30 ದಿವಸಗಳ ಒಳಗೆ ಬಾಧಿತರಾದ ವ್ಯಕ್ತಿಗಳು ಸಹಕಾರ ಸಂಘಗಳ ರಿಜಿಸ್ಟ್ರಾರ್ ರವರ ಮುಂದೆ ದಾಖಲಿಸುತ್ತಿದ್ದರು. ಆದರೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರನ್ವಯ, ಅಧಿನಿಯಮ ಪ್ರಕರಣ 70ಕ್ಕೆ ತಿದ್ದುಪಡಿ ಮಾಡಿದ್ದು, ಅದರಂತೆ ಇನ್ನು ಮುಂದೆ ಆಡಳಿತ ಮಂಡಳಿ ಸದಸ್ಯರ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದ ವಿವಾದ / ವ್ಯಾಜ್ಯಗಳನ್ನು ವ್ಯಾಪ್ತಿಯ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸತಕ್ಕದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ಕಾನೂನಿಗೆ ಅನುಗುಣವಾಗಿ ನಡೆಸುವ ಹೊಣೆಗಾರಿಕೆ ಸಹಕಾರ ಇಲಾಖಾಧಿಕಾರಿಗಳು ಹಾಗೂ ಸಹಕಾರ ಸಂಸ್ಥೆಗಳದ್ದಾಗಿರುತ್ತದೆ.

ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಅಧಿನಿಯಮ ಪ್ರಕರಣ 39-ಸಿ ನಲ್ಲಿ ಭ್ರಷ್ಟ ಆಚರಣೆಗಳು (Corrupt Practices) ಬಗ್ಗೆ ವಿವರಿಸಿದೆ ಹಾಗೂ 39-ಎ ದಿಂದ 39-ಕೆ ವರೆಗೆ ಚುನಾವಣೆ ಸಂಬಂಧ ವಿಧಿ-ವಿಧಾನಗಳ ಕುರಿತು ವಿವರಿಸಲಾಗಿದೆ. ಅಧಿನಿಯಮ ಪ್ರಕರಣ 109 ರಲ್ಲಿ ಅಪರಾಧಗಳ ಬಗ್ಗೆ ವಿವರಿಸಿದ್ದು, ಪ್ರಕಣ 111 ರಲ್ಲಿ ಅಪರಾಧಗಳ ಸಂಜ್ಞಾನದ (Cognizance of offences) ವಿವರ ಇರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ರೀತ್ಯಾ ಪ್ರಕರಣ 109ಕ್ಕೆ ಕೆಲವು ಸೇರ್ಪಡೆಯೊಂದಿಗೆ ತಿದ್ದುಪಡಿಯನ್ನು ತರಲಾಗಿದೆ. ಅಧಿನಿಯಮ 109ರ ಉಪ ಪ್ರಕರಣ (20)ರ ಮೇರೆಗೆ ಆಡಳಿತ ಮಂಡಳಿಯ ಯಾವುದೇ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಚುನಾವಣೆಯನ್ನು ನಡೆಸುವ ಸಂಬಂಧ, ನಿಗಧಿತ ಅವಧಿಯೊಳಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗವು ಪ್ರಕರಣ 39-ಎಎ ದಂತೆ ಗೊತ್ತುಪಡಿಸಲಾದ ಅವಧಿಯೊಳಗೆ ಸಲ್ಲಿಸಲು ವಿಫಲವಾದಲ್ಲಿ 6 ತಿಂಗಳ ಕಾರಾವಾಸ ಅಥವಾ ಹತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದಾಗಿದೆ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದಾಗಿದೆ.

ಅಲ್ಲದೇ (21) ಉಪ ಪ್ರಕರಣದಲ್ಲಿ ವಿವರಿಸಿರುವಂತೆ ಯಾವುದೇ ವ್ಯಕ್ತಿ, ಚುನಾವಣೆಗೆ ಮುಂಚೆ, ಚುನಾವಣಾ ಸಮಯದಲ್ಲಿ ಅಥವಾ ಆಡಳಿತ ಮಂಡಳಿ ಸದಸ್ಯರ ಚುನಾವಣೆ ನಂತರ ಅಧಿನಿಯಮ ಪ್ರಕರಣ 39-ಸಿ ದಲ್ಲಿ ವಿವರಿಸಿದಂತೆ ಭ್ರಷ್ಟ ಪದ್ಧತಿ ಅಳವಡಿಸಿಕೊಂಡಲ್ಲಿ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಪ್ರಕರಣ 39-ಕೆ ನಲ್ಲಿ ಪ್ರಸ್ತಾಪಿಸಿದಂತೆ ಯಾವುದೇ ಅಪರಾಧವೆಸಗಿದಲ್ಲಿ 6 ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಹತ್ತು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದಾಗಿದೆ.

ಸದಸ್ಯರ ಮತದಾರರ ಪಟ್ಟಿ, ಆಡಳಿತ ಮಂಡಳಿ ರಚನೆ, ಪದಾಧಿಕಾರಿಗಳ ವಿವರ ಇತ್ಯಾದಿ ವಿಷಯದ ಬಗ್ಗೆ ಸಂಘದ ಉಪನಿಯಮಗಳಲ್ಲಿ ವಿವರಗಳು ಇರುತ್ತದೆ. ಸಹಕಾರ ಸಂಘಗಳು ಅಧಿನಿಯಮಕ್ಕೆ / ನಿಯಮಕ್ಕೆ ಇತ್ತೀಚಿನವರೆಗೂ ಆಗಿರುವ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾಗಿ ಉಪನಿಯಮಗಳಿಗೆ ತಿದ್ದುಪಡಿ ಮಾಡಿಕೊಳ್ಳಬೇಕಾಗಿರುತ್ತದೆ. ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಇಲಾಖಾಧಿಕಾರಿಗಳು ಅಧಿನಿಯಮ, ನಿಯಮ, ಉಪನಿಯಮಗಳ ಅವಕಾಶಗಳ ಬಗ್ಗೆ ಸಮರ್ಪಕ ತಿಳುವಳಿಕೆಯನ್ನು ಹೊಂದಿರಬೇಕಾಗುತ್ತದೆ. ಚುನಾವಣೆ ವಿಷಯವಾಗಿ ಕಾರ್ಯನಿರ್ವಹಿಸುವ ಅಧಿಕಾರಿಗಳು / ನೌಕರರು, ಸಹಕಾರಿ ಅಧಿನಿಯಮ / ನಿಯಮಗಳು ಹಾಗೂ ಸಂಘದ ಉಪನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸತಕ್ಕದ್ದಾಗಿದೆ. ತಪ್ಪಿದಲ್ಲಿ, ಅಧಿನಿಯಮ ಪ್ರಕರಣ 39-ಸಿ ದಿಂದ 39-ಕೆ ಹಾಗೂ ಪ್ರಕರಣ 109ರ ಅಡಿಯಲ್ಲಿ ಚುನಾವಣೆ ಅಪರಾಧ / ಇತರೆ ಅಪರಾಧವೆಸಗಿದಲ್ಲಿ ದಂಡನೆಗೆ ಗುರಿಯಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಚುನಾವಣೆ ವಿಷಯವಾಗಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಕಾನೂನಿಗನುಗುಣವಾಗಿ ಹಾಗೂ ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನೀಡುವ ನಿರ್ದೇಶನಗಳನ್ವಯ ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ತಿಳಿಸಿದೆ.

ಸಹಿ/-

(ಎನ್.ಸಿ. ಮುನಿಯಪ್ಪ)

ಸಹಕಾರ ಚುನಾವಣಾ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು.

# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

ಸಂಖ್ಯೆ: ಸಚುಆ/ಅ.ಸೂ-3/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 26.04.2013.

## ಅಧಿಸೂಚನೆ

ವಿಷಯ: ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಮತದಾರರ ಪಟ್ಟಿ ಸಿದ್ಧಪಡಿಸುವ ಕುರಿತು.

ಉಲ್ಲೇಖ: ಸಹಕಾರ ಚುನಾವಣಾ ಆಯೋಗದ ಸುತ್ತೋಲೆ ಸಂಖ್ಯೆ: 1 ಮತ್ತು 2.

******

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012 ರ ಪ್ರಕರಣ 39-ಎ ರೀತ್ಯಾ, ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಗೆ ಸಾಮಾನ್ಯ ಚುನಾವಣೆಯು ರಾಜ್ಯ ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ನಡೆಸತಕ್ಕದ್ದಾಗಿದೆ. ಈ ದಿಸೆಯಲ್ಲಿ ಮಾರ್ಚ್ 2013 ರ ಅಂತ್ಯಕ್ಕೆ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಸಂಬಂಧಿಸಿದ ಸಂಘಗಳು ಹಾಗೂ ಇಲಾಖಾಧಿಕಾರಿಗಳು ಕಾರ್ಯ ಪ್ರವೃತ್ತರಾಗುವುದು ಆದ್ಯತೆಯ ವಿಷಯವಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 20 ರಲ್ಲಿ ಸದಸ್ಯರ ಮತದಾನದ ಬಗ್ಗೆ ವಿವರಗಳಿರುತ್ತದೆ. ಅದರಂತೆ,

1. ಸಹಕಾರ ಸಂಘದ ಸದಸ್ಯ / ಪ್ರತಿನಿಧಿಗೆ, ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚಿನ ಮತ ಇರತಕ್ಕದ್ದಲ್ಲ.
2. ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಸಾಲ ಪಡೆದ ಸದಸ್ಯರು, ಸಾಲ ಪಡೆದ ಸದಸ್ಯರ ಕ್ಷೇತ್ರದಲ್ಲಿ ಹಾಗೂ ಸಾಲ ಪಡೆಯದ ಸದಸ್ಯರು, ಸಾಲ ಪಡೆಯದೇ ಇರುವವರ ಕ್ಷೇತ್ರದಲ್ಲೇ ಮತ ಚಲಾಯಿಸುವ ಹಕ್ಕನ್ನು ಉಳ್ಳವರಾಗಿರುತ್ತಾರೆ. ಸಾಲ ಪಡೆದವರು, ಸಾಲ ಪಡೆಯದವರು ಎಂಬ ಬಗ್ಗೆ ಅಧಿನಿಯಮ ಪ್ರಕರಣ 20 (1) ರಲ್ಲಿ ಅರ್ಥೈಸಲಾಗಿದೆ.
3. ನಾಮ ಮಾತ್ರ ಅಥವಾ ಸಹ ಸದಸ್ಯರಿಗೆ ಮತದಾನದ (Nominal or Associate Member) ಹಕ್ಕು ಇರುವುದಿಲ್ಲ.
4. ಸುಸ್ತಿದಾರನಾದ ಸದಸ್ಯನಿಗೆ ಮತದಾನದ ಹಕ್ಕು ಇರುವುದಿಲ್ಲ (ಸುಸ್ತಿದಾರ ಎಂದರೆ ಯಾರು ಎಂಬ ಬಗ್ಗೆ ಈ ಪ್ರಕರಣದಲ್ಲಿ ವಿವರಣೆ ನೀಡಲಾಗಿದೆ)
5. ಸಂಘದ ಮಹಾಸಭೆಗೆ 12 ತಿಂಗಳುಗಳಿಗೆ ಮುಂಚೆ ಸಂಘದ ಸದಸ್ಯನಾಗಿಲ್ಲದವರಿಗೆ ಮತದಾನದ ಹಕ್ಕು ಇರುವುದಿಲ್ಲ.
6. ಸಹಕಾರ ಸಂಘಗಳ ಅಧಿನಿಯಮಕ್ಕೆ ಇತ್ತೀಚಿಗೆ ಆದ ತಿದ್ದುಪಡಿಯನ್ವಯ ಕಳೆದ 5 ಮಹಾಸಭೆಗಳಲ್ಲಿ 3 ಮಹಾಸಭೆಗಳಿಗೆ ಹಾಜರಾಗಲು ವಿಫಲನಾದ ಸದಸ್ಯ / ಪ್ರತಿನಿಧಿಗೆ ಮತದಾನದ ಹಕ್ಕು ಇರುವುದಿಲ್ಲ.
7. ಕಳೆದ 3 ಸಹಕಾರಿ ವರ್ಷಗಳಿಂದ ಸಂಘದಿಂದ ಉಪನಿಯಮದಲ್ಲಿ ಗೊತ್ತುಪಡಿಸಿದಂತೆ ಯಾವುದೇ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲನಾದ ಸದಸ್ಯ / ಪ್ರತಿನಿಧಿಯು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ.
8. ಸಹಕಾರ ಸಂಘವಾಗಿದ್ದಲ್ಲಿ:

(1) ಆ ಸಂಘದ ಆಡಳಿತ ಸಮಿತಿ ರದ್ದಾಗಿದ್ದಲ್ಲಿ ಅಥವಾ ಪ್ರಕರಣ 31ರ ಅಡಿಯಲ್ಲಿ ವಿಶೇಷಾಧಿಕಾರಿ ನೇಮಕ ಆಗಿದ್ದಲ್ಲಿ.

(2) ಪ್ರಕರಣ 72ರ ಅಡಿಯಲ್ಲಿ ಸಂಘದ ಸಮಾಪನೆಗೆ ಆದೇಶಿಸಿದ್ದಲ್ಲಿ.

(3) ಸಂಘವು ಉದ್ದೇಶಕ್ಕೆ ಅನುಗುಣವಾಗಿ ಕೆಲಸ ಪ್ರಾರಂಭಿಸದೇ ಇದ್ದಲ್ಲಿ ಅಥವಾ ಸ್ಥಗಿತಗೊಂಡಿದ್ದಲ್ಲಿ.

(4) ಯಾವ ಸಹಕಾರ ಸಂಘದಲ್ಲಿ ಸಾಲ ನೀಡಿಕೆಯೇ ಪ್ರಮುಖ ಉದ್ದೇಶವಾಗಿದ್ದು, ಅದರ ಸಾಲ ವಸೂಲಾತಿ ಒಟ್ಟು ತಗಾದೆಗೆ ಹಿಂದಿನ ಸಹಕಾರಿ ವರ್ಷದಲ್ಲಿ ಶೇ. 50 ಕ್ಕಿಂತ ಕಡಿಮೆಯಾಗಿದ್ದು ಮತ್ತು ವಸೂಲಾದ ಮೊಬಲಗನ್ನು ಆರ್ಥಿಕ ನೆರವು ನೀಡುವ ಬ್ಯಾಂಕಿಗೆ ಪಾವತಿಸಲು ವಿಫಲವಾಗಿದ್ದಲ್ಲಿ,

(ಎ) ಸಂಘದ ತಗಾದೆಯು ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ತಗಾದೆಗಿಂತ ಕಡಿಮೆಯಾಗಿದ್ದರೆ ಸಂಘದ ತಗಾದೆಯ ಶೇ. 50 ರಷ್ಟನ್ನು ಅಥವಾ,

(ಬಿ) ಸಂಘದ ತಗಾದೆಯು ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ತಗಾದೆಗಿಂತ ಹೆಚ್ಚಾಗಿದ್ದರೆ, ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ವಾಸ್ತವಿಕ ತಗಾದೆಯಷ್ಟನ್ನು, ಸದರಿ ಸಹಕಾರಿ ವರ್ಷ ಮುಗಿದ ಹದಿನೈದು ದಿನಗಳಗಿಂತ ತಡವಾಗದಂತೆ ವರ್ಗಾವಣೆ ಮಾಡಲು ವಿಫಲವಾಗಿದೆಯೋ,

9. ಸಂಘದ ಸದಸ್ಯರಲ್ಲಿ ಯಾರಾದರೂ ಮೃತಪಟ್ಟಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ, ಅಂತಹ ಸದಸ್ಯರ ಹೆಸರನ್ನು ಸದಸ್ಯರ ಪಟ್ಟಿ / ಮತದಾರರ ಪಟ್ಟಿಯಿಂದ ತೆಗೆದುಹಾಕಬೇಕಾಗುತ್ತದೆ.

10. ಸಂಘದ ಸದಸ್ಯತ್ವವು ಅಧಿನಿಯಮ ಪ್ರಕರಣ 17 ರ ಮೇರೆಗೆ ರದ್ದುಗೊಂಡಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ ಸದಸ್ಯರ / ಮತದಾರರ ಪಟ್ಟಿಯಿಂದ ಕೈ ಬಿಡಬೇಕಾಗುತ್ತದೆ.

11. ರಾಜ್ಯ ಉಚ್ಛ ನ್ಯಾಯಾಲಯ ಅಥವಾ ಇತರ ಯಾವುದೇ ನ್ಯಾಯಾಲಯದ ಆದೇಶದಂತೆ ಯಾವುದೇ ವ್ಯಕ್ತಿಯ ಸದಸ್ಯತ್ವ ರದ್ದಾಗಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮವಿಡಬೇಕಾಗುತ್ತದೆ.

12. ಸಂಘದ ಸದಸ್ಯರೇ ಯಾವುದೇ ಕಾರಣದಿಂದ, ಸಂಘದ ಸದಸ್ಯತ್ವದ ವಾಪಾಸಾತಿ / ರದ್ದತಿಗಾಗಿ ಕೋರಿಕೆ ಪ್ರಸ್ತಾವವಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಬೇಕಾಗುತ್ತದೆ / ಮತ್ತು ಅಗತ್ಯ ಕ್ರಮವಿಡಬೇಕಾಗುತ್ತದೆ.

13. ಸಂಘದ ಆಡಳಿತ ಮಂಡಳಿಗೆ ಬೈಲಾ ಅವಕಾಶದಂತೆ ಬೇರೆ, ಬೇರೆ ಕ್ಷೇತ್ರಗಳಿಂದ ಆಯಾ ಕ್ಷೇತ್ರಗಳ ಸದಸ್ಯರೇ ನಿರ್ದೇಶಕರನ್ನು ಚುನಾಯಿಸಬೇಕಾಗಿದ್ದಲ್ಲಿ, ಅಂತಹ ಸಂಧರ್ಭದಲ್ಲಿ ಕ್ಷೇತ್ರವಾರು ಮತದ್ಧಾರರ ಯಾದಿಯನ್ನು ಸಿದ್ದಪಡಿಸುವುದು.

14. ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು, ತಮ್ಮ ವ್ಯಾಪ್ತಿಯಲ್ಲಿ ಬರುವ, ಚುನಾವಣೆ ನಡೆಸಲು ಬಾಕಿ ಇರುವ ಸಂಘಗಳ ಸಂಬಂಧ, ಸಂಬಂಧಿಸಿದ ಸಂಘಗಳು ಸಹಕಾರ ಸಂಘಗಳ ಅಧಿನಿಯಮ, ನಿಯಮಗಳು ಹಾಗೂ ಸಂಘದ ಉಪನಿಯಮಗಳ ಅವಕಾಶದಂತೆ, ಮತದಾನದ ಹಕ್ಕು ಹೊಂದಿರುವ ಬಿಡಿ ಸದಸ್ಯರ ಮತದಾರರ ಪಟ್ಟಿ; ಬಿಡಿ ಸದಸ್ಯರು / ಹಾಗೂ ದ್ವಿತೀಯ ವರ್ಗದ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ ಮತದಾನದ ಹಕ್ಕು ಹೊಂದಿರುವ ಪ್ರತಿನಿಧಿಗಳು ಹಾಗೂ ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳಲ್ಲಿ ಮತದಾನದ ಹಕ್ಕುಳ್ಳ ಸಂಘದ ಪ್ರತಿನಿಧಿಗಳ ಪಟ್ಟಿಯನ್ನು ತಯಾರಿಸುವ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದಾಗಿದೆ. ಅಲ್ಲದೇ ಕರಡು ಮತದಾರರ ಪಟ್ಟಿಯ ಪ್ರಕಟಣೆ, ಸುಸ್ತಿದಾರರ ಪಟ್ಟಿಯ ಪ್ರಕಟಣೆಯನ್ನು ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿ, ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಧಿತ ಅವಧಿಯೊಳಗೆ ಸಲ್ಲಿಸುವಂತೆ ಸೂಚಿಸಬಹುದಾಗಿದೆ.

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ, ಇಲಾಖಾಧಿಕಾರಿಗಳು ತ್ವರಿತವಾಗಿ ಕಾರ್ಯ ಪ್ರವೃತ್ತರಾಗಿ ಚುನಾವಣೆ ನಡೆಸಬೇಕಾಗಿರುವ ಮತದಾರರ ಸಂಘಗಳ ಪಟ್ಟಿಯನ್ನು ಸಿದ್ದಪಡಿಸುವ ಬಗ್ಗೆ ಸಹಕಾರ ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ನಿರ್ದೇಶಿಸಿದೆ.

(ಎನ್. ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ :

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ

2. ಸಹಕಾರ ಸಂಘಗಳ ಅಪರ ನಿಬಂಧಕರು(            ) ಕೇಂದ್ರ ಕಚೇರಿ, ಬೆಂಗಳೂರು
3. ಸಹಕಾರ ಸಂಘಗಳ ಜಂಟಿ ನಿಬಂಧಕರು, . . . . . . . . . . . . . . . ಪ್ರಾಂತ, . . . . . . . . . . . . .
4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು
12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು
13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, . . . . . . . . . . . . . . . . . . . . . . .

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

ಮ:03.

ಕರ್ನಾಟಕಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

ಸಂಖ್ಯೆ: ಸಚುಆ/ಅ.ಸೂ-4/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು,
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 3 .05.2013.

### ಅಧಿಸೂಚನೆ

ವಿಷಯ: ಹೊಸದಾಗಿ ನೋಂದಣಿಯಾದ /ಆಡಳಿತ ಮಂಡಳಿ ರದ್ದಾಗಿರುವ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ CO 31 CLM 2013, ಬೆಂಗಳೂರು ದಿನಾಂಕ: 15-4-2013.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ,1959(ಕರ್ನಾಟಕ ಅಧಿನಿಯಮ ಸಂಖ್ಯೆ 11/1959)ಕ್ಕೆ ತಂದಿರುವ ತಿದ್ದುಪಡಿ, ಕರ್ನಾಟಕ ಸಹಕಾರ ಸಂಘಗಳ ("ತಿದ್ದುಪಡಿ")ಅಧಿನಿಯಮ 2012 (ಸಂಕ್ಷಿಪ್ತವಾಗಿ ' ತಿದ್ದುಪಡಿ ಅಧಿನಿಯಮ') ದಿನಾಂಕ11-2-2013 ರಿಂದ ಜಾರಿಗೆ ಬಂದಿರುತ್ತದೆ. ಅದರಂತೆ ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳು ಮತ್ತು ಯಾವ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಲಾಗಿತ್ತೊ ಅಂತಹ ಸಹಕಾರ ಸಂಘಗಳ ಚುನಾವಣೆಯನ್ನು ಸಹಕಾರ ಆಯೋಗದಿಂದಲೇ ನಿಗಧಿತ ಅವಧಿಯಲ್ಲಿ ನಡೆಸತಕ್ಕದ್ದಾಗಿರುತ್ತದೆ.

ಸಹಕಾರ ಸಂಘಗಳು ತಿದ್ದುಪಡಿ ಅಧಿನಿಯಮದ ಅವಕಾಶದಂತೆ ಉಪನಿಯಮಗಳಿಗೆ, ಅಧಿನಿಯಮ ಜಾರಿಗೊಳಿಸಿದ ದಿನಾಂಕದಿಂದ 90 ದಿವಸಗಳ ಒಳಗಾಗಿ ತಿದ್ದುಪಡಿ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ಹಾಗೂ ತಿದ್ದುಪಡಿ ಅಧಿನಿಯಮಕ್ಕೆ ನಿಯಮಗಳ ರಚನೆ ಆಗದೇ ಇರುವುದರಿಂದ, ಕಾರ್ಯನಿರ್ವಹಣೆ ದೃಷ್ಟಿಯಿಂದ ಸಹಕಾರ ಚುನಾವಣಾ ಆಯೋಗದ ಪೂರ್ಣಪ್ರಮಾಣದ ರಚನೆ ಆಗದೇ ಇರುವುದ್ದರಿಂದ್ದ ಹಾಗೂ ಹೊಸದಾಗಿ ನೋಂದಣಿ ಆದ ಸಹಕಾರ ಸಂಘಗಳು ಮತ್ತು ಆಡಳಿತ ಮಂಡಳಿ ರದ್ದಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು, ಸಹಕಾರ ಚುನಾವಣಾ ಆಯೋಗವೇ ನಡೆಸಬೇಕಾಗಿದ್ದು, ಸಹಕಾರ ಚುನಾವಣಾ ಆಯೋಗದ ಕಾರ್ಯನಿರ್ವಹಣೆಗೆ ಪೂರ್ಣಪ್ರಮಾಣದ ರಚನೆ ಆಗದೇ ಇರುವ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ತಿದ್ದುಪಡಿ ಅಧಿನಿಯಮ ಪ್ರಕರಣ 132ರ ಅವಕಾಶದಂತೆ ತೊಂದರೆಯನ್ನು ನಿವಾರಿಸುವ ದೃಷ್ಟಿಯಿಂದ ಕರ್ನಾಟಕ ಸಹಕಾರ ಸಂಘಗಳು(ತೊಂದರೆಯನ್ನು ನಿವಾರಿಸುವ) ಆದೇಶ 2013 ಅನ್ನು ದಿನಾಂಕ:15-4-2013ರಲ್ಲಿ ಹೊರಡಿಸಿದ್ದು ಸದರಿ ಆದೇಶವು ಕೂಡಲೇ ಜಾರಿಗೆ ಬಂದಿರುತ್ತದೆ. ಅದರಂತೆ

1. 2012ರ ತಿದ್ದುಪಡಿ ಅಧಿನಿಯಮ ಪ್ರಕರಣ 6ರಲ್ಲಿ ಏನೇ ಇದ್ದರೂ ಸಹಕಾರ ಸಂಘಗಳ ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಳ್ಳುವ ಅವಧಿಯನ್ನು ದಿನಾಂಕ: 31-10-2013ರವರೆಗೆ ವಿಸ್ತರಿಸಲಾಗಿದೆ.

2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28A ದ ಉಪ ಪ್ರಕರಣ (4)ರಲ್ಲಿ ಏನೇ ಇದ್ದರೂ ದಿನಾಂಕ:30-09-2013ಕ್ಕೆ ಮುಂಚೆ ಚುನಾವಣೆಗೆ ಬಾಕಿ ಇರುವ ಹೊಸದಾಗಿ ನೋಂದಣಿಯಾಗಿರುವ ಸಹಕಾರ ಸಂಘದ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವಿಕೆಯನ್ನು ದಿನಾಂಕ:30-09-2013ರವರೆಗೆ ವಿಸ್ತರಿಸಲಾಗಿದೆ.

3. ಅಧಿನಿಯಮ ಪ್ರಕರಣ 30ರ ಮೇರೆಗೆ ಆಡಳಿತ ಸಮಿತಿ ರದ್ದಾದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012ರಲ್ಲಿ ತಿದ್ದುಪಡಿ

ಅಭಿವೃದ್ಧಿ ಆಯುಕ್ತರು ಹಾಗೂ ... ಇಲಾಖೆ ... ಸಚಿವಾಲಯ

ಮಾಡಿರುವ ಅಧಿನಿಯಮದಂತೆ ದಿನಾಂಕ:30-09-2013ರವರೆಗೆ ಬಾಕಿಯಾಗುವ ಚುನಾವಣೆಗಳನ್ನು ದಿನಾಂಕ: 30-09-2013ರವರೆಗೆ ವಿಸ್ತರಿಸಲಾಗಿದೆ.

2012ರಲ್ಲಿ ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ ನಿಯಮಗಳನ್ನು ರಚಿಸುವ ಬಗ್ಗೆ ರಾಜ್ಯ ಸರ್ಕಾರವು ಕ್ರಮ ಕೈಗೊಂಡಿದ್ದು, ಈ ಹಿನ್ನೆಲೆಯಲ್ಲಿ ಕರಡು ನಿಯಮಗಳನ್ನು ಅಧಿಸೂಚನೆ ಸಂಖ್ಯೆ Co.14.CLM.2013, ದಿನಾಂಕ:20-04-2013ಅನ್ನು ಕರ್ನಾಟಕ ರಾಜ್ಯದ ವಿಶೇಷ ರಾಜ್ಯಪತ್ರದಲ್ಲಿ ದಿನಾಂಕ 20-04-2013ರಲ್ಲಿ ಈಗಾಗಲೇ ಪ್ರಕಟಿಸಲಾಗಿದ್ದು, ಸಲಹೆಗಳು/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಣೆ ಹೊರಡಿಸಿದ 30 ದಿವಸಗಳ ಒಳಗೆ ಸರ್ಕಾರಕ್ಕೆ ತಿಳಿಸುವಂತೆ ಸರ್ಕಾರವು ಪ್ರಕಟಣೆ ನೀಡಿರುತ್ತದೆ. ನಿಯಮಗಳ ರಚನೆ ಅಂತಿಮವಾದ ಕೂಡಲೇ ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳ ಆಡಳಿತಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ಮತ್ತು ಆಡಳಿತ ಸಮಿತಿ ರದ್ದಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಸಹಕಾರ ಇಲಾಖಾಧಿಕಾರಿಗಳಿಗೆ ಸೂಚಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು.
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ:

1. ಸಹಕಾರ ಸಂಘಗಳ ನಿಬಂಧಕರು, #1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಸಹಕಾರ ಸಂಘಗಳ ಅಪರ ನಿಬಂಧಕರು( ) ಕೇಂದ್ರ ಕಚೇರಿ, ಬೆಂಗಳೂರು
3. ಸಹಕಾರ ಸಂಘಗಳ ಜಂಟಿ ನಿಬಂಧಕರು, ............... ಪ್ರಾಂತ, .............
4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು
12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು
13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, ...................

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

ಬಿವಿ

# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

ಸಂಖ್ಯೆ: ಸಚುಆ/ಅ.ಸೂ-5/2013-14.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 14.05.2013.

## ಅಧಿಸೂಚನೆ

ವಿಷಯ: ಸಹಕಾರ ಸಂಘಗಳ ಆಡಳಿತ / ಪದಾಧಿಕಾರಿ ಹುದ್ದೆಗಳಿಗೆ ಚುನಾವಣೆ ನಡೆಸುವಿಕೆ ಪೂರ್ವಸಿದ್ದತೆ ಮಾಡಿಕೊಳ್ಳುವ ಕುರಿತು:

ಉಲ್ಲೇಖ: ಸಹಕಾರ ಚುನಾವಣಾ ಆಯೋಗವು ಈಗಾಗಲೇ ಹೊರಡಿಸಿರುವ ಅಧಿಸೂಚನೆಗಳು ದಿನಾಂಕ: 18.04.2013, 22.04.2013, 26.04.2013 ಮತ್ತು 03.05.2013.

*****

ಕರ್ನಾಟಕ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಸಂಬಂಧ ಸಹಕಾರ ಚುನಾವಣಾ ಆಯೋಗವು ಉಲ್ಲೇಖದಲ್ಲಿ ಕಾಣಿಸಲಾದ ವಿವಿಧ ಅಧಿಸೂಚನೆಗಳಲ್ಲಿ ಹಲವಾರು ಅಂಶಗಳನ್ನು ಪ್ರಸ್ತಾಪಿಸಿದ್ದು, ಈ ಬಗ್ಗೆ ಸಹಕಾರ ಇಲಾಖಾಧಿಕಾರಿಗಳು ಪೂರ್ವ ಸಿದ್ದತೆ ಮಾಡಿಕೊಳ್ಳುವ ಕುರಿತು ಕಾರ್ಯ ಪ್ರವೃತ್ತರಾಗುವಂತೆ ಸೂಚಿಸಿರುವುದು ಸರಿಯಷ್ಟೆ. ಚುನಾವಣೆಯನ್ನು ನಡೆಸುವ ಸಂಬಂಧ ಮುಂದುವರಿದಂತೆ ಈ ಕೆಳ ಕಾಣಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

1. ಸಂಘದ ಮುಖ್ಯ ಕಾರ್ಯ ನಿರ್ವಾಹಕ ತಾತ್ಕಾಲಿಕ ಮತದಾರರ ಪಟ್ಟಿ ಸಿದ್ದಪಡಿಸಿ, ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವಿಕೆ. ಕ್ಷೇತ್ರವಾರು / ಗ್ರಾಮವಾರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ಸಂಘದ ಬೈಲಾದಲ್ಲಿ ಪರಿಶೀಲಿಸಿ ಕ್ರಮವಿಡುವುದು.

2. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 (ಸಂಕ್ಷಿಪ್ತವಾಗಿ 'ನಿಯಮ')ರ ನಿಯಮ 13-ಎ ರೀತ್ಯಾ ಸಹ ಸಂಘದ ಮುಖ್ಯ ಕಾರ್ಯ ನಿರ್ವಾಹಕರು ಸಂಘದ ಪ್ರತಿ ಸದಸ್ಯನಿಗೆ ಭಾವಚಿತ್ರವುಳ್ಳ ಗುರುತಿನ ಕಾರ್ಡ್ (Identity Card)ಅನ್ನು ನೀಡತಕ್ಕದ್ದಾಗಿದೆ. ನಿಯಮ 25 ರೀತ್ಯಾ ಗುರುತಿನ ಕಾರ್ಡ್ ಪಡೆದ ಸದಸ್ಯನು ನಿಗಧಿತ ರಿಜಿಸ್ಟರ್‌ನಲ್ಲಿ ಸಹಿ ಮಾಡಿ ಗುರುತಿನ ಚೀಟಿಯನ್ನು ( Identity Slip) ಪಡೆದು, ನಂತರ ಮತದಾನ ಮಾಡಲು ಮುಂದುವರಿಯಬೇಕಾಗುತ್ತದೆ. ಈ ಬಗ್ಗೆ ಇಲಾಖಾಧಿಕಾರಿಗಳು ಗಮನ ಹರಿಸಿ, ಸಂಘದ ಪ್ರತಿ ಸದಸ್ಯರಿಗೂ, ಗುರುತಿನ ಕಾರ್ಡ್‌ನ್ನು ನೀಡುವ ಕುರಿತು ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಕರಿಗೆ ಸೂಚಿಸುವುದು.

3. ಸಂಘವು ಚುನಾವಣೆ ನಡೆಸಲು ಸ್ವಂತ ಕಟ್ಟಡ ಹೊಂದಿದೆಯೆ ? ಅಥವಾ ಬೇರೆ ವ್ಯವಸ್ಥೆ ಮಾಡಿಕೊಳ್ಳುವ ಅಗತ್ಯವಿದ್ದಲ್ಲಿ ಈ ಬಗ್ಗೆ ಪರಿಶೀಲಿಸುವಿಕೆ.

4. ಸಂಘದಲ್ಲಿ ಚುನಾವಣೆಗಾಗಿ / ಸಿಬ್ಬಂದಿಯ ಉಪಯೋಗಕ್ಕೆ ಪೀಠೋಪಕರಣಗಳ ಲಭ್ಯತೆ.

5. ಸಂಘದಲ್ಲಿ ಚುನಾವಣೆ ನಡೆಸಲು ಮತದಾನದ ಅವಶ್ಯಕತೆ ಕಂಡು ಬಂದಲ್ಲಿ ಮತ ಪೆಟ್ಟಿಗೆಯ ಲಭ್ಯತೆ ಬಗ್ಗೆ ಪರಿಶೀಲನೆ- ಅಗತ್ಯವೆನಿಸಿದಲ್ಲಿ ಕಂದಾಯ ಇಲಾಖೆಯಿಂದ ಪಡೆಯುವ ಬಗ್ಗೆ ಕ್ರಮವಿಡುವುದು.

6. ಚುನಾವಣಾಧಿಕಾರಿ (Returning Officer) / ಚುನಾವಣಾ ಸಿಬ್ಬಂದಿ ಲಭ್ಯತೆ ( Polling Staff) ಸರ್ಕಾರದ ಬೇರೆ ಇಲಾಖೆಗಳಿಂದ ಅಧಿಕಾರಿ / ಸಿಬ್ಬಂದಿ ಸೇವೆ ಪಡೆಯುವ ಬಗ್ಗೆ ಪರಿಶೀಲಿಸುವಿಕೆ.

7. ಚುನಾವಣಾ ಅಧಿಕಾರಿ / ಸಿಬ್ಬಂದಿಗೆ ತರಬೇತಿ ವ್ಯವಸ್ಥೆ ಮಾಡುವಿಕೆ.

8. ಚುನಾವಣೆ ಮುಗಿದ ನಂತರ ಮತ ಎಣಿಕೆಗಾಗಿ ಸ್ಥಳಾವಕಾಶದ ಲಭ್ಯತೆ ಬಗ್ಗೆ ಪರಿಶೀಲನೆ.

9. ದಿನಾಂಕ: 31.03.2013ಕ್ಕೆ ಚುನಾವಣೆ ಬಾಕಿ ಇರುವ ಸಹಕಾರ ಸಂಘಗಳಿಗೆ ಸಾಮಾನ್ಯ ಚುನಾವಣೆ, ಅಧಿನಿಯಮ ಪ್ರಕರಣ 30 (1) ರ ಅಡಿಯಲ್ಲಿ ರದ್ದತಿಯಾದ ಪ್ರಕರಣಗಳು; ಅಧಿನಿಯಮ ಪ್ರಕರಣ 31 ರ ಅಡಿಯಲ್ಲಿ ಕ್ರಮ ಕೈಗೊಂಡಿರುವ ಪ್ರಕರಣಗಳು, ಗೌರವ ಉಚ್ಛ ನ್ಯಾಯಾಲಯದಿಂದ ನಿರ್ದೇಶನವೇನಾದರೂ ಇದ್ದಲ್ಲಿ, ಅಂತಹ ಪ್ರಕರಣಗಳು, ಈ ರೀತಿ ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳ ವರ್ಗವಾರು ಪಟ್ಟಿ ತಯಾರಿಸುವಿಕೆ ಬಗ್ಗೆ ಇಲಾಖಾಧಿಕಾರಿಗಳು ಗಮನ ಹರಿಸತಕ್ಕದ್ದು.

10. ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ಸುಸ್ತಿದಾರರ ಪಟ್ಟಿಯನ್ನು ಸಂಬಂಧಿಸಿದ ಸಂಘಗಳು ತಯಾರಿಸುವಿಕೆ.

11. ಅಧಿನಿಯಮ ಪ್ರಕರಣ 39-ಬಿ ರೀತ್ಯಾ ಚುನಾವಣೆಯನ್ನು ನಡೆಸಲು ಚುನಾವಣಾ ಸಿಬ್ಬಂದಿಗೆ ನಿಗದಿತ ಪ್ರಾಧಿಕಾರ ಗೊತ್ತುಪಡಿಸಿದಂತೆ ಪಾವತಿಸಬೇಕಾದ ದಿನ ಭತ್ಯೆ, ಪ್ರಯಾಣ ಭತ್ಯೆ ಇತರೆ ಸಂಭಾವನೆಯನ್ನು ಸಂಬಂಧಿಸಿದ ಸಹಕಾರ ಸಂಘವೇ ಭರಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಸಂಘಗಳು ಚುನಾವಣಾ ವೆಚ್ಚ ಭರಿಸಲು ಆರ್ಥಿಕ ಸಾಮರ್ಥ್ಯ ಹೊಂದಿರುವಿಕೆ, ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವ ಬಗ್ಗೆ ಸಂಬಂಧಿಸಿದ ಸಂಘಗಳಿಗೆ ಸೂಚಿಸುವಿಕೆ.

12. ಕಾನೂನು ಮತ್ತು ಶಿಸ್ತು ಪಾಲನೆ ಸಂಬಂಧ ಆರಕ್ಷಕ ಸೇವೆ ಪಡೆಯುವಿಕೆ. ಈ ಸಂಬಂಧ ವ್ಯಾಪ್ತಿಯ ಆರಕ್ಷಕ ಅಧಿಕಾರಿಗಳನ್ನು ಸಂಪರ್ಕಿಸುವಿಕೆ.

13. ಚುನಾವಣೆ ನಡೆಸುವ ಸಂಬಂಧ ಅವಶ್ಯಕವಾದ ಚುನಾವಣಾ ಸಾಮಗ್ರಿಗಳನ್ನು ಸಂಘದವರು ಚುನಾವಣೆಗಾಗಿ ವ್ಯವಸ್ಥೆ ಮಾಡುವಿಕೆ.

14. ಅಧಿನಿಯಮ ಪ್ರಕರಣ 114 ರೀತ್ಯಾ ಇತ್ತೀಚಿನ ಪ್ರತಿ ಸಹಕಾರ ಸಂಘವು ಇತ್ತೀಚಿನ ತಿದ್ದುಪಡಿಗಳನ್ನೊಳಗೊಂಡ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960 ಈ ಪುಸ್ತಕವನ್ನು ಇಡತಕ್ಕದ್ದಾಗಿದೆ. ಯಾವುದೇ ಸಂಘವು ಅಧಿನಿಯಮ / ನಿಯಮದ ಪುಸ್ತಕವನ್ನು ಹೊಂದಿಲ್ಲದೇ ಇದ್ದಲ್ಲಿ, ಖರೀದಿಸಿ ಸಂಘದಲ್ಲಿ ಇಡುವ ಬಗ್ಗೆ ಸಂಬಂಧಿಸಿದ ಸಂಘಕ್ಕೆ ಸೂಚಿಸುವಿಕೆ.

15. ಚುನಾವಣೆ ನಡೆಸುವ ಸಂಬಂದ, ವಿವಿಧ ವರ್ಗಗಳಿಗೆ ಮೀಸಲಾತಿ, ಕ್ಷೇತ್ರವಾರು / ಭೌಗೋಳಿಕವಾಗಿ ಆಯ್ಕೆ ಮಾಡಬೇಕಾಗಿದ್ದಲ್ಲಿ, ಬೈಲಾ ಅವಕಾಶವನ್ನು ಪರಿಶೀಲಿಸಬೇಕಾಗುತ್ತದೆ. ಸಂಘವು ಮೂಲ ಬೈಲಾ ಪ್ರತಿಯನ್ನು ಇತ್ತೀಚಿನವರೆಗಿನ ತಿದ್ದುಪಡಿಗಳೊಡನೆ ಇಟ್ಟಿದಿಯೇ ? ಅಥವಾ ಯಾವುದೇ ಕಾರಣದಿಂದ ಲಭ್ಯವಿಲ್ಲದ ಸಂದರ್ಭದಲ್ಲಿ, ನೊಂದಣಿ ಪ್ರಾಧಿಕಾರದಿಂದ ದೃಢೀಕೃತ ಪ್ರತಿ ಪಡೆದು ಸಂಘದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು.

16. ಚುನಾವಣೆ ನಡೆಸುವಲ್ಲಿ ಸಂಘದ ಕಾರ್ಯವ್ಯಾಪ್ತಿಯಲ್ಲಿ ಪ್ರಾಕೃತಿಕವಾಗಿ ಏನಾದರೂ ತೊಂದರೆ ಕಂಡುಬಂದಲ್ಲಿ, ರಾಜ್ಯ ಸಹಕಾರ ಚುನಾವಣಾ ಆಯೋಗದ ಗಮನಕ್ಕೆ ತರತಕ್ಕದ್ದು.

(ಎನ್. ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ :

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ

2. ಸಹಕಾರ ಸಂಘಗಳ ಅಪರ ನಿಬಂಧಕರು(            ) ಕೇಂದ್ರ ಕಚೇರಿ, ಬೆಂಗಳೂರು

3. ಸಹಕಾರ ಸಂಘಗಳ ಜಂಟಿ ನಿಬಂಧಕರು, . . . . . . . . . . . . . . . ಪ್ರಾಂತ, . . . . . . . . . . . . .

4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ

5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು

6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ

8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು

9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು

10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು

11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು

12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು

13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, . . . . . . . . . . . . . . . . . .

14. ಎಲ್ಲಾ ಉಪ ವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01